

# ‘ದೇವಿ’ಯ ಎರಡು ಮುಖಗಳು

**ಹೆಣ್ಣನ್ನು ‘ದೇವಿ’ಯೆಂದು ಗೌರವಿಸುವ ಸಮಾಜವೇ, ಆಕೆಯ ಪ್ರತಿಕ್ಷಣವನ್ನೂ ಅಸುರಕ್ಷಿತಗೊಳಿಸಿದೆ. ಈ ವೈರುಧ್ಯಕ್ಕೆ ಕನ್ನಡಿ ಹಿಡಿಯುವಂತಿದೆ ‘ದೇವಿ’ ಕಿರುಚಿತ್ರ.**

■ ರಾಘವೇಂದ್ರ ಕೆ.

ಚಿತ್ರ ಪರಧಿಯ ಚೌಕಟ್ಟಿಗೆ ಕಣ್ಣು ಹರಿಸುವ ಮುನ್ನವೇ ಕರ್ಕಶ ಶಬ್ದ ಕಿವಿಗೆ ಬೀಳುತ್ತದೆ. ಅದು ಕತ್ತಲುಗೂಡಿರುವ ಕರಾಳ ಬದುಕಿನ ಸಂಕೀರ್ಣತೆಯನ್ನು ತೋರಲು ಯತ್ನಿಸುವ ಬೆಳಕಿನ ಕಿಂಡಿಯಂತೆ ಕಾಣಿಸುವ ದೃಶ್ಯ. ಚಿಕ್ಕದೊಂದು ಕೋಣೆ, ಒಳಗೆ ಆ ಕೋಣೆಗೆ ಜೀವತುಂಬುವಂತೆ ಕಾಣಿಸುತ್ತಿರುವ ಮಹಿಳೆಯರು. ಅವರು ಭಾರತೀಯ ಜೀವನಪದ್ಧತಿಯ ವೈವಿಧ್ಯವನ್ನು ಪ್ರತಿಬಿಂಬಿಸುವಂತೆ ಕಾಣಿಸುತ್ತಾರೆ. ಎಲ್ಲರೂ ಗಡಿಬಿಡಿಯಲ್ಲಿ ತಮ್ಮ ಕಾರ್ಯದಲ್ಲಿ ತೊಡಗಿದ್ದಾರೆ. ಅದು ಆಧುನಿಕ ಭಾರತದ ಧಾವಂತದ ದೈನಿಕವನ್ನು ಸಂಕೇತಿಸುವಂತಿದೆ.

ಅಗರಬತ್ತಿ ಬೆಳಗಿ ದೇವರನ್ನು ಆರಾಧಿಸುವ ಹೆಣ್ಣೊಬ್ಬಳು, ಆರತಿಯನ್ನು ಎಲ್ಲ ದಿಕ್ಕುಗಳಲ್ಲಿ ಬೆಳಗುತ್ತಾಳೆ. ವೈದ್ಯಕೀಯ ವಿದ್ಯಾರ್ಥಿನಿಯೊಬ್ಬಳು ಅಧ್ಯಯನಶೀಲಳಾಗಿದ್ದಾಳೆ. ನಡುವಯಸ್ಸಿನ ಮೂವರು ಇಸ್ಪೀಟ್ ಆಟದಲ್ಲಿ ಮಗ್ನರಾಗಿದ್ದಾರೆ. ಬೇರೆ ಯಾವ ವಿಚಾರಕ್ಕೂ ಅವರಿಗೆ ಪುರುಸೊತ್ತಿಲ್ಲ. ಯುವತಿಯೊಬ್ಬಳು ಮದ್ಯವನ್ನು ಹೀರುತ್ತಾ ಅಮಲಿನಲ್ಲಿ ತೇಲಾಡುತ್ತಿದ್ದಾಳೆ. ಹಿರಿಯ ಜೀವವೊಂದು ಅಡುಗೆಗೆ ಹಸಿಬಟಾಣಿ ಬಿಡಿಸುತ್ತಿದೆ. ಬುರ್ಕಾ ಧರಿಸಿದ ಯುವತಿ ತನ್ನ ಕಾಲಿನಲ್ಲಿ ಬೇಡವಾದ ರೋಮಗಳನ್ನು ತೆಗೆಯಲು ವ್ಯಾಕ್ಸ್ ಮಾಡುತ್ತಿದ್ದಾಳೆ. ಆದರೆ ಮೂಕ ಹುಡುಗಿಯೊಬ್ಬಳು ಟೀವಿಯನ್ನು ಸ್ಪಷ್ಟವಾಗಿ ನೋಡಲು ಪ್ರಯತ್ನಿಸುತ್ತಾಳೆ. ತನ್ನ ತುಮುಲವನ್ನು ಸನ್ನೆಯ ಮೂಲಕ ಪ್ರಕಟಿಸುವ ಸನ್ನಿವೇಶ ಏನನ್ನೋ ಬಿಂಬಿಸುತ್ತಿದ್ದಂತೆಯೇ ಟೀವಿಯಲ್ಲಿ ಸುದ್ದಿ ಬಿತ್ತರವಾಗುತ್ತದೆ.

ನಿತ್ಯವೂ ಭಾರತದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳ ಅಂಕಿಅಂಶಗಳನ್ನು ಪ್ರಕಟಿಸುತ್ತದೆ. ಅಷ್ಟರಲ್ಲಿ ಟೀವಿಯ ದೃಶ್ಯ ಅಸ್ಪಷ್ಟವಾಗಿ ಮಾಯವಾಗುತ್ತದೆ.

**ಹೆಸರು:** ದೇವಿ
**ನಿರ್ದೇಶನ:** ಪ್ರಿಯಾಂಕಾ ಬ್ಯಾನರ್ಜಿ
**ನಿರ್ಮಾಣ:** ನಿರಂಜನ್ ಅಯ್ಯಂಗಾರ್ ಮತ್ತು ರ್‍ಯಾನ್ ಇವಾನ್ ಸ್ಟೀಫನ್
**ತಾರಾಗಣ:** ಕಾಜೊಲ್, ಶ್ರುತಿ ಹಾಸನ್, ನೇಹಾ ದುಪಿಯಾ, ನೀನಾ ಕುಲಕರ್ಣಿ, ಶಿವಾನಿ ರಘುವಂಶಿ, ಮುಕ್ತಾ ಬರ್ವೆ, ಯಶಸ್ವಿನಿ ದಯಾಮ, ಸಂಧ್ಯಾ, ರಮಾ ಜೋಷಿ.

ಮಹಿಳೆಯರ ವೇದನೆಯ ಕಥೆ ನಿರೂಪಿಸುವ ಈ ಸಿನಿಮಾದ ಹೆಸರು ‘ದೇವಿ’. ಪರಂಪರೆಯ ಆರಾಧನೆಯ ಭಾವ ಪ್ರಕಟಿಸುವ ದೇವತೆಯ ಹೆಸರು ದುಷ್ಟರನ್ನು ಶಿಕ್ಷಿಸುವ ಶಕ್ತಿಯೂ ಹೌದು. ಅಂತಹ ದೈವ ಸ್ವರೂಪಿ ಮಹಿಳೆಯ ಮೇಲೆ ನಡೆಯುವ ದೌರ್ಜನ್ಯಕ್ಕೆ ಎಲ್ಲೆ ಇಲ್ಲ ಎನ್ನುವುದನ್ನು ಹೇಳುವುದೇ ಈ ಕಿರುಚಿತ್ರದ ಉದ್ದೇಶ. ಭಾವನೆಗಳನ್ನು ಬಡಿದೆಬ್ಬಿಸುವ ಸಸ್ಪೆನ್ಸ್ ಕಥೆಯನ್ನು ನಿರೂಪಿಸುವಲ್ಲಿ ‘ದೇವಿ’ ಸಫಲವಾಗಿದೆ. 13 ನಿಮಿಷಗಳಲ್ಲಿ ಭಾರತದ ಸಮುದಾಯಗಳ ವೈವಿಧ್ಯದ ಬದುಕಿನ ಮಜಲನ್ನು ಒಂದು ಚೌಕಟ್ಟಿಗೆ ತರುವ ಪ್ರಯತ್ನ ಚೆನ್ನಾಗಿದೆ.

ಕಥೆ ತನ್ನ ನಿಗೂಢತೆಯನ್ನು ಬಿಚ್ಚಿಡದಿರಲು ವಾಚ್ಯವಾಗದಿರಲು ಬಯಸುತ್ತದೆ. ಅಲ್ಲಿರುವ ಎಲ್ಲರೂ ದೌರ್ಜನ್ಯಕ್ಕೆ ತುತ್ತಾದವರೇ ಆಗಿದ್ದಾರೆ. ಇಕ್ಕಟ್ಟಾದ ಆ ಚಿಕ್ಕಕೋಣೆಯೇ ಅವರಿಗೆ ಭದ್ರತೆಯ ಭಾವವನ್ನು ಮೂಡಿಸಿದೆ. ವಾಸ್ತವದಲ್ಲಿ ಸ್ಥಳಾವಕಾಶ ಎಲ್ಲರಿಗೂ ಸಾಕಾಗುವುದಿಲ್ಲ. ಆದರೆ ಯಾರೊಬ್ಬರಿಗೂ ಅದರಾಚೆ ಹೋಗುವ ಮನಸ್ಸಿಲ್ಲ. ಹೊರ ಹೋಗಬೇಕು ಎನ್ನುವ ಮಾತು ಕೇಳಿದ ತಕ್ಷಣ ಎಲ್ಲರೂ ಧ್ವನಿ ಎತ್ತರಿಸಿ ತಮ್ಮ ಪ್ರತಿರೋಧ ವ್ಯಕ್ತಪಡಿಸುತ್ತಾರೆ. ವೈದ್ಯಕೀಯ ವಿದ್ಯಾರ್ಥಿನಿ, ಎಲ್ಲರೂ ತಂಗಲು ಇಲ್ಲಿ ಸಾಧ್ಯ ಇಲ್ಲ ಎಂದು ಅಲ್ಲಿಂದ ಹೊರಹೋಗಬೇಕಾದ ಅಗತ್ಯವನ್ನು ಮನವರಿಕೆ ಮಾಡುತ್ತಾಳೆ. ಅಷ್ಟರಲ್ಲಿ ಮನೆಯ ಕಾಲಿಂಗ್ ಬೆಲ್ ಶಬ್ದ ಮಾಡುತ್ತದೆ. ಆ ತಕ್ಷಣ ಎಲ್ಲರಲ್ಲೂ ದಿಗಿಲು. ಬಾಗಿಲನ್ನು ತೆರೆಯುವ ಧೈರ್ಯವನ್ನು ಯಾರೂ ತೋರುವುದಿಲ್ಲ. ಬಹುಶಃ ಅವರಿಗೆ ಎರಡು ರೀತಿಯ ಆತಂಕ. ಯಾರಾದರೂ ಆಶ್ರಯ ಬಯಸಿ ಇವರ ಬಳಿ ಬರಬಹುದು. ಇಲ್ಲವೇ ತಮ್ಮ ಮೇಲೆ ದೌರ್ಜನ್ಯ ಎಸಗುವ ಅಪಾಯದ ಸಾಧ್ಯತೆ ಇನ್ನೂ ಇದೆ. ಬಾಗಿಲನ್ನು ಗಟ್ಟಿ ಮನಸ್ಸಿನಿಂದ ತೆಗೆಯಲಾಗುತ್ತದೆ. ಬಾಲಕಿಯೊಬ್ಬಳು ಒಳ ಪ್ರವೇಶಿಸುತ್ತಾಳೆ. ಎಲ್ಲರಲ್ಲೂ ಆತಂಕ. ಆ ಮಗು ಓಡಿ ಹೋಗಿ ಹೆಂಗಸೊಬ್ಬಳನ್ನು ತಬ್ಬಿಕೊಳ್ಳುತ್ತದೆ. ಆ ಸನ್ನಿವೇಶ ಚಿಕ್ಕಮಕ್ಕಳಿಗೂ ರಕ್ಷಣೆಯನ್ನು ಒದಗಿಸಲು ಆಗದ ಪರಿಸ್ಥಿತಿಯನ್ನು ಎದೆಗೆ ತಿವಿದಂತೆ ಕಾಣಿಸುತ್ತದೆ.

ಮಹಿಳೆಯರಿಗೆ ಭದ್ರತೆ ಇಲ್ಲ ಎಂಬ ಟೀವಿ ವರದಿಯನ್ನು ನೀಡಿದ್ದರ ಚಾರಿತ್ರಿಕ ರೂಪವೇ ಅಲ್ಲಿದ್ದ ಎಲ್ಲರ ಕಣ್ಣಿನಲ್ಲಿ ಕಾಣಿಸಿದಂತಿದೆ. ಆ ಸುದ್ದಿಯನ್ನು ಯಾರೂ ಸರಿಯಾಗಿ ಕೇಳುತ್ತಿಲ್ಲ. ಮೂಗಿಗೆ ಅದನ್ನು ಸಂಪೂರ್ಣ ಗ್ರಹಿಸುವ ಮನಸ್ಸಿದೆ. ಆ ಸುದ್ದಿಯಲ್ಲಿ 2018ರಲ್ಲಿ ನಡೆದ ಸಮೀಕ್ಷೆಯ ವಿವರಗಳಿವೆ. ಪ್ರತಿ 22 ನಿಮಿಷಕ್ಕೆ ಒಬ್ಬ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಯುತ್ತದೆ ಎನ್ನುತ್ತದೆ ಸಮೀಕ್ಷೆ.

‘ದೇವಿ’ ಕಿರುಚಿತ್ರ ವೀಕ್ಷಣೆಗೆ youtube.com/watch?v=2KP0aDTVtFI ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.